# ನಾಗರೀಕ ಸನ್ನದು

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

**ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ**

# ನಾಗರೀಕ ಸನ್ನದು

## ನವೆಂಬರ್ 01, 2025ರಂದು ನವೀಕರಿಸಲಾಗಿದೆ

ವಿಜ್ಞಾನ ಮತ್ತು ತಂತ್ರಜ್ಞಾನಗಳಿಗೆ ಉತ್ತೇಜನ ನೀಡಲು ಮತ್ತು ಜನಸಾಮಾನ್ಯರಲ್ಲಿ ಅದರಲ್ಲೂ ವಿಶೇಷವಾಗಿ ಕರ್ನಾಟಕದ ಗ್ರಾಮೀಣ ಭಾಗದ ಜನರಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸಲು, ಕರ್ನಾಟಕ ಸರ್ಕಾರವು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿಯಲ್ಲಿ ಸ್ಥಾಪಿಸಿದೆ.

**ಸ್ಥಾಪನೆ:** ಜುಲೈ 30, 2005

**ಸರ್ಕಾರಿ ಆದೇಶ:** ವಿಯಇ ವಿತ್ರಮ 2005 ದಿನಾಂಕ 30.07.2005

**ನೊಂದಾಯಿತ ಸಂಸ್ಥೆ:** ಕರ್ನಾಟಕ ಸಂಘ ನಿಯಮಾವಳಿ 1960ರಡಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸ್ವಾಯತ್ತ ಸಂಸ್ಥೆಯಾಗಿ ಏಪ್ರಿಲ್ 06, 2009 ರಂದು ನೊಂದಾಯಿಸಲಾಗಿದೆ.

**ಸದಸ್ಯತ್ವ:** ಹೆಸರಾಂತ ವಿಜ್ಞಾನಿಗಳು ಮತ್ತು ಶಿಕ್ಷಣ ತಜ್ಞರು, ಸರ್ಕಾರದ ವಿವಿಧ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಹಾಗೂ ವೈಜ್ಞಾನಿಕ ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೊಂಡಿರುವಂತೆ ಅಕಾಡೆಮಿಯ ಸದಸ್ಯರನ್ನು ಕರ್ನಾಟಕ ಸರ್ಕಾರವು ನಾಮಕರಣ ಮಾಡುತ್ತದೆ.

**ಅಧ್ಯಕ್ಷರು:**

- **ಪ್ರೊ. ಎ. ಎಚ್. ರಾಜಾಸಾಬ್,** ವಿಶ್ರಾಂತ ಕುಲಪತಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

**ಸದಸ್ಯರು:**

**ಪದನಿಮಿತ್ತ ಸದಸ್ಯರು**:

- **ಡಾ. ಎನ್. ಮಂಜುಳ, ಭಾಆಸೇ,** ಸರ್ಕಾರದ ಕಾರ್ಯದರ್ಶಿಗಳು, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ & ತಂತ್ರಜ್ಞಾನ ಇಲಾಖೆ
- **ಶ್ರೀ ರಿತೀಷ್ ಕುಮಾರ್ ಸಿಂಗ್, ಭಾಆಸೇ,** ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ

- **ಶ್ರೀಮತಿ ಉಮಾ ಮಹದೇವನ್, ಭಾಆಸೇ,** ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
- **ಶ್ರೀ ಅಜುಂ ಪರ್ವೇಜ್, ಭಾಆಸೇ,** ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ ಮತ್ತು ಜೀವಪರಿಸರ ಇಲಾಖೆ
- **ಡಾ. ಕೆ. ಜಿ. ಜಗದೀಶ, ಭಾಆಸೇ,** ಸರ್ಕಾರದ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ
- **ಶ್ರೀ ಸದಾಶಿವಪ್ರಭು ಭಾಆಸೇ,** ನಿರ್ದೇಶಕರು, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ & ತಂತ್ರಜ್ಞಾನ ಇಲಾಖೆ/ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್/ ಸದಸ್ಯಕಾರ್ಯದರ್ಶಿಗಳು, ಕವಿತಂಅ

**ನಾಮನಿರ್ದೇಶಿತ ಸದಸ್ಯರು:**

- **ಪ್ರೊ. ಎಸ್. ಬಿ. ದಂಡಿನ್,** ವಿಶ್ರಾಂತ ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ
- **ಪ್ರೊ. ಹೆಚ್. ಎಸ್. ನಾಗರಾಜ,** ಸಂಸ್ಥಾಪಕ ನಿರ್ದೇಶಕರು, ಪ್ರಯೋಗ ಶಿಕ್ಷಣ ಸಂಶೋಧನಾ ಸಂಸ್ಥೆ
- **ಪ್ರೊ. ಎಸ್. ರಾಜೇಂದ್ರ ಪ್ರಸಾದ್,** ವಿಶ್ರಾಂತ ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ
- **ಡಾ. ಹೆಚ್. ಹೊನ್ನೇಗೌಡ,** ನಿವೃತ್ತ ವಿಶೇಷ ಕಾರ್ಯದರ್ಶಿಗಳು (ತಾಂತ್ರಿಕ), ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ
- **ಡಾ. ಅಶೋಕ್ ಎಸ್. ಆಲೂರು,** ಕುಲಪತಿಗಳು, ಕೊಡಗು ವಿಶ್ವವಿದ್ಯಾನಿಲಯ
- **ಡಾ. ವಸುಂದರ ಭೂಪತಿ,** ಮಾಜಿ ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ
- **ಡಾ. ಎಂ. ಕೆ. ನಾಯ್ಕ,** ವಿಶ್ರಾಂತ ಕುಲಪತಿಗಳು, ಶಿವಮೊಗ್ಗ ಕೃಷಿ & ತೋಟಗಾರಿಕೆ ವಿಶ್ವವಿದ್ಯಾನಿಲಯ
- **ಡಾ. ಹೆಚ್. ನಾಗನಗೌಡ,** ನಿವೃತ್ತ ನಿರ್ದೇಶಕರು, ರಾಷ್ಟ್ರೀಯ ಸೌರ ತಂತ್ರಜ್ಞಾನಗಳ ತರಬೇತಿ ಕೇಂದ್ರ
- **ಡಾ. ಪ್ರಭಾಕರ ಸಂಗೂರ್ ಮಠ,** ನಿವೃತ್ತ ಕಾರ್ಯನಿರ್ವಾಹಕ ನಿರ್ದೇಶಕರು, ಹಟ್ಟಿ ಗೋಲ್ಡ್ ಮೈನ್ಸ್ ಕಂ. ಲಿ.
- **ಡಾ. ಚಂದ್ರಶೇಖರ ಬಿರಾದರ,** ಸಂಸ್ಥಾಪಕರು & ಸಿಎಂಡಿ, ಗ್ಲೋಬಲ್ ಗ್ರೀನ್ ಗ್ರೋತ್
- **ಡಾ. ಹೆಚ್. ಎನ್. ಜಗನ್ನಾಥ ರೆಡ್ಡಿ,** ಪ್ರೊಫೆಸರ್, ಸಿವಿಲ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಇನ್ಸಿಟ್ಯೂಟ್ ಆಫ್ ಟಕ್ನಾಲಜಿ
- **ಡಾ. ಹುಲಿಕಲ್ ನಟರಾಜ್,** ಸಂಸ್ಥಾಪಕ ಅಧ್ಯಕ್ಷರು, ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಮಂಡಳಿ
- **ಶ್ರೀ ಕೃಷ್ಣಮೂರ್ತಿ ಮಂಜುನಾಥ್,** ಅಧ್ಯಕ್ಷರು, ಮಾರ್ಸ್ ಹೋಮ್ಬೇಸ್ ಆರ್ಗನೈಸೇಷನ್ ಅಕಾಡೆಮಿ

**ವಿಷನ್**:

'ಸರ್ವರ ಬದುಕಿಗಾಗಿ ಜ್ಞಾನ-ವಿಜ್ಞಾನ-ತಂತ್ರಜ್ಞಾನದ ಬೆಳಕು'

**ಮಿಷನ್**:

'ಸಮಾಜದ ಕಲ್ಯಾಣಕ್ಕಾಗಿ ವಿಜ್ಞಾನ ಪ್ರೋತ್ಸಾಹ, ತಂತ್ರಜ್ಞಾನ ಪ್ರಸರಣ ಮತ್ತು ಆವಿಷ್ಕಾರಗಳನ್ನು ಪೋಷಿಸುವಲ್ಲಿ ಪ್ರಮುಖ ಪಾತ್ರ ವಹಿಸುವುದು'

**ಕಾರ್ಯಕ್ರಮಗಳ ಬಗ್ಗೆ ಮಾಹಿತಿ**:

1. **ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಶೇಷ ಉಪನ್ಯಾಸ ಮಾಲೆ**

   **ಫಲಾನುಭವಿಗಳು**: ವಿಜ್ಞಾನ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು (ಸಸ್ಯ ವಿಜ್ಞಾನ, ಪ್ರಾಣಿ ವಿಜ್ಞಾನ, ರಸಾಯನ ವಿಜ್ಞಾನ, ಭೌತ ವಿಜ್ಞಾನ, ತೋಟಗಾರಿಕೆ/ಕೃಷಿ ವಿಜ್ಞಾನ ಮತ್ತು ಆಹಾರ ವಿಜ್ಞಾನ

   **ವ್ಯಾಪ್ತಿ:** ಕರ್ನಾಟಕ ರಾಜ್ಯ

   **ಕಾರ್ಯಕ್ರಮ**: ಅಕಾಡೆಮಿಯು ಆಯಾಯ ವಿಶ್ವವಿದ್ಯಾನಿಲಯದ ವಿಭಾಗಗಳ ಸಹಯೋಗದಲ್ಲಿ ಸಸ್ಯ ವಿಜ್ಞಾನ, ಪ್ರಾಣಿ ವಿಜ್ಞಾನ, ರಸಾಯನ ವಿಜ್ಞಾನ, ಭೌತ ವಿಜ್ಞಾನ, ತೋಟಗಾರಿಕೆ ಅಥವಾ ಕೃಷಿ ವಿಜ್ಞಾನ ಮತ್ತು ಆಹಾರ ವಿಜ್ಞಾನ ವಿಷಯಗಳಲ್ಲಿ ಉಪನ್ಯಾಸ ಮಾಲೆ ನಡೆಸುವುದು. ಕೋವಿಡ್19 ಪಿಡುಗಿನಿಂದಾಗಿ ಸದರಿ ಕಾರ್ಯಕ್ರಮವನ್ನು ವೆಬಿನಾರ್ ಮೂಲಕ ನಡೆಸಲಾಗುವುದು. ಅಕಾಡೆಮಿಯ ವೆಬ್ ಸೈಟ್‌ನಲ್ಲಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದಾಗಿದೆ.

2. **ವಾರ್ಷಿಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಧಾನ ಸಮ್ಮೇಳನಗಳು**

   **ಫಲಾನುಭವಿಗಳು**: ವಿಜ್ಞಾನ ಬೋಧಕ ವರ್ಗ, ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು, ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿ ವರ್ಗದವರು, ಜನಸಾಮಾನ್ಯರು ಮತ್ತು ಆಸಕ್ತರು. ಅಕಾಡೆಮಿಯ ವೆಬ್ ಸೈಟ್‌ನಲ್ಲಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದಾಗಿದೆ.

   **ಫಲಾನುಭವಿಗಳ ಸಂಖ್ಯೆ** : 2000

   **ವ್ಯಾಪ್ತಿ:** ಕರ್ನಾಟಕ ರಾಜ್ಯ

## ೩. ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನ

**ಫಲಾನುಭವಿಗಳು**: ವಿಜ್ಞಾನ ಬೋಧಕ ವರ್ಗ, ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು, ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿ ವರ್ಗದವರು, ಜನಸಾಮಾನ್ಯರು ಮತ್ತು ಆಸಕ್ತರು. ಅಕಾಡೆಮಿಯ ವೆಬ್ ಸೈಟ್‌ನಲ್ಲಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದಾಗಿದೆ.

**ಫಲಾನುಭವಿಗಳ ಸಂಖ್ಯೆ** : ೬೦೦

**ವ್ಯಾಪ್ತಿ:** ಕರ್ನಾಟಕ ರಾಜ್ಯ

## 4. ವಿಜಾನ ಮತ್ತು ತಂತ್ರಜ್ಞಾನ ವಿಷಯದಲ್ಲಿ ಸರ್ಟಿಫಿಕೆಟ್ ಕೋರ್ಸ್

**ಫಲಾನುಭವಿಗಳು**: ವಿಜ್ಞಾನ ಪದವಿ, ಸ್ನಾತಕೋತ್ತರ ಪದವಿ ಮತ್ತು ಇಂಜಿನಿಯರಿಂಗ್ ಉಪನ್ಯಾಸಕರು ಹಾಗೂ ಸಂಶೋಧನಾ ವಿದ್ಯಾರ್ಥಿಗಳು. ಅಕಾಡೆಮಿಯ ವೆಬ್ ಸೈಟ್‌ನಲ್ಲಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದಾಗಿದೆ.

**ವ್ಯಾಪ್ತಿ:** ಕರ್ನಾಟಕ ರಾಜ್ಯ

**ಆಯ್ಕೆ ಪ್ರಕ್ರಿಯೆ**: ದಿನ ಪತ್ರಿಕೆಯಲ್ಲಿ ಮತ್ತು ವೆಬ್ ಸೈಟ್‌ನಲ್ಲಿ ಪ್ರಕಟಣೆ ನೀಡಲಾಗುವುದು. ಮೊದಲು ನೊಂದಾಯಿಸಿದವರಿಗೆ ಮೊದಲ ಆದ್ಯತೆ

## ೫. ವಿಜ್ಞಾನ ಲೋಕ ದ್ವೈಮಾಸಿಕ ಸಂಚಿಕೆ

**ಫಲಾನುಭವಿಗಳು**: ಪದವಿ ಪೂರ್ವ ಮತ್ತು ಪದವಿ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ಮತ್ತು ಜನಸಾಮಾನ್ಯರು.

**ವೇಳಾ ಪಟ್ಟಿ**: ಪ್ರತಿ ವರ್ಷ ಜನವರಿ, ಮಾರ್ಚ್, ಮೇ, ಜುಲೈ, ಸೆಪ್ಟೆಂಬರ್ ಮತ್ತು ನವೆಂಬರ್ ಮಾಹೆಯಲ್ಲಿ ಪ್ರಕಟ

**ಚಂದಾದಾರಿಕೆ**: ವಿಜ್ಞಾನ ಲೋಕ ಸಂಚಿಕೆಯ ಚಂದಾದಾರಿಕೆ ಶುಲ್ಕವನ್ನು ಏಪ್ರಿಲ್ ೨೦೨1 ರಿಂದ ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ:

| ಚಂದಾದಾರಿಕೆ | ವೈಯಕ್ತಿಕ | ಸಾಂಸ್ಥಿಕ |
|---|---|---|
| ಬಿಡಿ ಪ್ರತಿ | ರೂ. ೫೦/- | - |
| ವಾರ್ಷಿಕ | ರೂ. ೩೦೦/- | ರೂ. ೫೦೦/- |
| ೩ ವರ್ಷಗಳು | ರೂ. 8೭೫/- | ರೂ. 1೫೦೦/- |

ಆಸಕ್ತರು ಚಂದಾಹಣವನ್ನು ಈ ಕೆಳಕಂಡ ಅಕಾಡೆಮಿಯ ಖಾತೆಗೆ ಜಮಾ ಮಾಡಿ ಸಂದಾಯ ಮಾಡಿದ ವಿವರವನ್ನು ನಮ್ಮ ಇ–ಮೇಲ್ vijnanaloka@gmail.com ಗೆ ಕಳುಹಿಸಿ

**ವ್ಯಾಪ್ತಿ:** ಕರ್ನಾಟಕ ರಾಜ್ಯ

6. **ಶ್ರೇಷ್ಠ ಲೇಖಕ ಪ್ರಶಸ್ತಿ – ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ ಹಾಗೂ ಕೃಷಿ ವಿಷಯದ ಕನ್ನಡ ಪುಸ್ತಕಗಳು**

**ಫಲಾನುಭವಿಗಳು**: ಕೃಷಿ, ವಿಜ್ಞಾನ, ವೈದ್ಯಕೀಯ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಕನ್ನಡದಲ್ಲಿ ಪುಸ್ತಕ ಬರೆದು ಪ್ರಕಟಿಸಿರುವ ಲೇಖಕರು

**ವ್ಯಾಪ್ತಿ:** ಕರ್ನಾಟಕ ರಾಜ್ಯ

**ಪ್ರಶಸ್ತಿ**: ಕೃಷಿ, ವಿಜ್ಞಾನ, ತಂತ್ರಜ್ಞಾನ ಮತ್ತು ವೈದ್ಯಕೀಯ ವಿಷಯಗಳಲ್ಲಿ ಸಲ್ಲಿಕೆಯಾದ ಒಟ್ಟು ಪುಸ್ತಕಗಳ ಸಂಖ್ಯೆಗನುಗುಣವಾಗಿ ಗರಿಷ್ಠ 2 ಪ್ರಶಸ್ತಿಗಳನ್ನು ಪ್ರತಿ ವಿಷಯದಲ್ಲಿ ನೀಡಲಾಗುವುದು)

**ಆಯ್ಕೆ ಪ್ರಕ್ರಿಯೆ**:

- ಪ್ರಶಸ್ತಿಯನ್ನು ಎರಡು ವರ್ಷಗಳಿಗೊಮ್ಮೆ ನೀಡಲಾಗುವುದು
- ಪತ್ರಿಕೆಯಲ್ಲಿ ಪ್ರಕಟಣೆ – ಪ್ರತಿ ವರ್ಷ ಆಗಸ್ಟ್ ಮಾಹೆ
- ಬಾಹ್ಯ ಪರಿಣಿತರಿಂದ ಮೌಲ್ಯಮಾಪನ ಮತ್ತು ಅಕಾಡೆಮಿಯ ತಜ್ಞ ಸಮಿತಿಯಿಂದ ಅನುಮೋದನೆ
- ಫೆಬ್ರವರಿ/ಮಾರ್ಚ್ ಮಾಹೆಯಲ್ಲಿ ಪ್ರಶಸ್ತಿ ಪ್ರಧಾನ
- ವಿವರಗಳಿಗೆ ಅಕಾಡೆಮಿಯ ಅಂತರ್ಜಾಲ ತಾಣ ವೀಕ್ಷಿಸಿ

7. **ರಾಷ್ಟ್ರೀಯ ವಿಜ್ಞಾನ ದಿನ ಹಾಗೂ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಹತ್ವದ ದಿನಗಳ ಆಚರಣೆ**

**ಫಲಾನುಭವಿಗಳು**: ವಿಜ್ಞಾನ ಪದವಿ ವಿದ್ಯಾರ್ಥಿಗಳು ಮತ್ತು ಬೋಧಕ ವರ್ಗ ಮತ್ತು ಜನಸಾಮಾನ್ಯರು

**ಫಲಾನುಭವಿಗಳ ಸಂಖ್ಯೆ**: 300 – 400

**ವ್ಯಾಪ್ತಿ**: ಕರ್ನಾಟಕ ರಾಜ್ಯ

**ಆಯ್ಕೆ:** ಆಸಕ್ತ ವಿಜ್ಞಾನ ಪದವಿ ಕಾಲೇಜುಗಳು ಕಾರ್ಯಕ್ರಮ ನಡೆಸುವುದಾಗಿ ಇಚ್ಛೆ ವ್ಯಕ್ತಪಡಿಸಿ ಅಕಾಡೆಮಿಗೆ ಪ್ರಸ್ತಾವನೆ ಕಳುಹಿಸಬಹುದು ಅಥವಾ ಅಕಾಡೆಮಿಯು ಅರ್ಹ ಕಾಲೇಜುಗಳನ್ನು ಸಂಪರ್ಕಿಸಿ ಕಾರ್ಯಕ್ರಮ ನಡೆಸಲು ಕೋರಬಹುದು. ಅಕಾಡೆಮಿಯ ವೆಬ್ ಸೈಟ್‌ನಲ್ಲಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದಾಗಿದೆ.

**ಸಂಪರ್ಕ ವಿಳಾಸ:**

**ಡಾ. ಆನಂದ್ ಆರ್**
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ, ತೋಟಗಾರಿಕೆ ವಿಜ್ಞಾನಗಳ ಕಾಲೇಜು ಆವರಣ
ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡಬೆಟ್ಟಹಳ್ಳಿ ಬಡಾವಣೆ, ವಿದ್ಯಾರಣ್ಯಪುರ ಪೋಸ್ಟ್,
ಬೆಂಗಳೂರು-560097
ದೂ/ಫ್ಯಾಕ್ಸ್ : 080-29721550
email: ksta.gok@gmail.com website: www.kstacademy.in